# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1464**
**ವಿಧಾನ ಪರಿಷತ್ತ್ ಸದಸ್ಯರ ಹೆಸರು : ಶ್ರೀ ಎಸ್ ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸುವ ದಿನಾಂಕ : 18-12-2025**
**ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಹೊಸ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪನೆ ಮಾಡಲು ಮಾನದಂಡಗಳನ್ನು ರೂಪಿಸಲಾಗಿದೆಯೇ; ರೂಪಿಸಿದಲ್ಲಿ, ವಿವರ ನೀಡುವುದು; | ಕೇಂದ್ರ ಸರ್ಕಾರದ Standing Fire Advisory Council(SFAC) ರನ್ವಯ ಅಗ್ನಿಶಾಮಕ ಠಾಣೆಯ ಸ್ಥಾಪನೆಗೆ ಮುಖ್ಯವಾಗಿ ಜನಸಂಖ್ಯೆ, ಪ್ರತಿಕ್ರಿಯೆ ಸಮಯ ಮತ್ತು ಟ್ರಾಫಿಕ್ ದಟ್ಟಣೆಯ ಜೊತೆಗೆ ಜನಸಂಖ್ಯೆಯನ್ನಾಧರಿಸಿ ಅಗ್ನಿಶಾಮಕ ಠಾಣೆ ಮತ್ತು ಅಗ್ನಿಶಾಮಕ ಉಪಕರಣಗಳ ಅಗತ್ಯತೆಯನ್ನು ನಿರ್ದಿಷ್ಟಪಡಿಸಲಾಗಿದೆ. ಹೊಸದಾಗಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿರುತ್ತದೆ.<br>1. ನಗರ ವ್ಯಾಪ್ತಿಯ ಪ್ರತಿ 10 ಚ.ಕಿ.ಮೀಗೆ 01 ಅಗ್ನಿಶಾಮಕ ಠಾಣೆ ಇರಬೇಕಾಗುತ್ತದೆ.<br>2. ಗ್ರಾಮೀಣ ಪ್ರದೇಶದ ವ್ಯಾಪ್ತಿಯ ಪ್ರತಿ 50 ಚ.ಕಿ.ಮೀಗೆ 01 ಅಗ್ನಿಶಾಮಕ ಠಾಣೆ ಇರಬೇಕಾಗುತ್ತದೆ.<br>ಸ್ಪಂದನಾ ಸಮಯವು ನಗರ ಪ್ರದೇಶದಲ್ಲಿ 5 ನಿಮಿಷ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 20 ನಿಮಿಷದಲ್ಲಿ ತಲುಪಬೇಕಾಗಿರುತ್ತದೆ. |
| (ಆ) | ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಿಗೆ ಅಗತ್ಯವಿರುವ ಅಗ್ನಿಶಾಮಕ ಠಾಣೆಗಳೆಷ್ಟು; ಪ್ರಸ್ತುತ ಸ್ಥಾಪನೆಯಾಗಿರುವ ಠಾಣೆಗಳೆಷ್ಟು; ಈ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳೆಷ್ಟು; ಠಾಣಾವಾರು ವಿವರ ನೀಡುವುದು; | ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಡದಿ ಕೈಗಾರಿಕಾ ಪ್ರದೇಶಕ್ಕೆ ಕೇಂದ್ರ ಸರ್ಕಾರದ 15 ನೇ ಹಣಕಾಸು ಆಯೋಗದಡಿಯಲ್ಲಿ ಅಗ್ನಿಶಾಮಕ ಠಾಣೆ ಮಂಜೂರಾಗಿರುತ್ತದೆ.<br>ಕೆ-ಸೇಫ್-2 ಯೋಜನೆಯಡಿ 2025-26 ನೇ ಸಾಲಿನಲ್ಲಿ ಹಾರೋಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಅಗ್ನಿಶಾಮಕ ಠಾಣೆಯು ಮಂಜೂರಾಗಿರುತ್ತದೆ.<br>ಪ್ರಸ್ತುತ ಸ್ಥಾಪನೆಯಾಗಿರುವ ಅಗ್ನಿಶಾಮಕ ಠಾಣೆಗಳ ವಿವರ ಈ ಕೆಳಕಂಡತಿದೆ:- |

<table>
<tr>
<td></td>
<td></td>
<td>
<table>
<tr><th>ಕ್ರ. ಸಂ</th><th>ಬೆಂಗಳೂರು ಗ್ರಾಮಾಂತರ</th><th>ಬೆಂಗಳೂರು ದಕ್ಷಿಣ ಜಿಲ್ಲೆ</th></tr>
<tr><td>01</td><td>ನೆಲಮಂಗಲ</td><td>ರಾಮನಗರ</td></tr>
<tr><td>02</td><td>ಹೊಸಕೋಟೆ</td><td>ಕನಕಪುರ</td></tr>
<tr><td>03</td><td>ದೇವನಹಳ್ಳಿ</td><td>ಮಾಗಡಿ</td></tr>
<tr><td>04</td><td>ದೊಡ್ಡಬಳ್ಳಾಪುರ</td><td>ಚನ್ನಪಟ್ಟಣ</td></tr>
</table>
ಬೆಂಗಳೂರು ಗ್ರಾಮಾಂತರ & ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿ ಸ್ಥಾಪನೆಯಾಗಿರುವ ಅಗ್ನಿಶಾಮಕ ಠಾಣೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ & ಸಿಬ್ಬಂದಿಯವರ ಠಾಣಾವಾರು ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
</td>
</tr>
<tr>
<td>(ಇ)</td>
<td>ಈ ಜಿಲ್ಲೆಗಳ ಅಗ್ನಿಶಾಮಕ ಠಾಣೆಗಳಿಗೆ ಅಗತ್ಯವಿರುವ ಬೆಂಕಿ ನಂದಿಸುವ ವಾಹನಗಳೆಷ್ಟು; ಯಾವ ಯಾವ ಠಾಣೆಗಳಲ್ಲಿ ಬೆಂಕಿ ನಂದಿಸುವ ವಾಹನಗಳಿವೆ; ಈ ವಾಹನಗಳು ಕಾರ್ಯನಿರ್ವಹಿಸುತ್ತಿವೆಯೇ; ಠಾಣಾವಾರು ವಿವರ ನೀಡುವುದು;</td>
<td>ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳ ಅಗ್ನಿಶಾಮಕ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಗ್ನಿನಂದಕ ವಾಹನಗಳು ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.</td>
</tr>
<tr>
<td>(ಈ)</td>
<td>ಈ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಅಗ್ನಿಶಾಮಕ ಠಾಣೆಗಳ ಅಭಿವೃದ್ಧಿಗಾಗಿ ಕಳೆದ 5 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು; ವರ್ಷವಾರು ಮತ್ತು ಠಾಣಾವಾರು ವಿವರ ನೀಡುವುದು?</td>
<td>ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.</td>
</tr>
</table>

**ಸಂಖ್ಯೆ: ಹೆಚ್‌ಡಿ 360 ಎಸ್‌ಎಫ್‌ಬಿ 2025**

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**

## ಅನುಬಂಧ-1

**ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆ ಅಗ್ನಿಶಾಮಕ ಠಾಣಾವಾರು ಮಂಜೂರಾದ, ಭರ್ತಿ ಇರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ. (ದಿನಾಂಕ: 01-12-2025)**

| ಕ್ರ. ಸಂ. | ಅಗ್ನಿಶಾಮಕ ಠಾಣೆ | ಮಂಜೂರಾದ ಹುದ್ದೆಗಳು | ಭರ್ತಿ ಇರುವ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|
| | ಬೆಂಗಳೂರು ಗ್ರಾಮಾಂತರ | | | |
| 1. | ನೆಲಮಂಗಲ | 29 | 19 | 10 |
| 2. | ಹೊಸಕೋಟೆ | 27 | 16 | 11 |
| 3. | ದೇವನಹಳ್ಳಿ | 61 | 33 | 28 |
| 4. | ದೊಡ್ಡಬಳ್ಳಾಪುರ | 27 | 17 | 10 |
| | ಬೆಂಗಳೂರು ದಕ್ಷಿಣ ಜಿಲ್ಲೆ | | | |
| 1. | ರಾಮನಗರ | 33 | 21 | 12 |
| 2. | ಕನಕಪುರ | 27 | 14 | 13 |
| 3. | ಮಾಗಡಿ | 27 | 15 | 12 |
| 4. | ಚನ್ನಪಟ್ಟಣ | 27 | 14 | 13 |

## ಅನುಬಂಧ-02

**ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಅಗ್ನಿಶಾಮಕ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಾಹನಗಳ ವಿವರ**

| ಕ್ರ. ಸಂ. | ಬೆಂಗಳೂರು ಗ್ರಾಮಾಂತರ | ಅಗ್ನಿನಂದಕ ವಾಹನಗಳು | ಬೆಂಗಳೂರು ದಕ್ಷಿಣ ಜಿಲ್ಲೆ | ಅಗ್ನಿನಂದಕ ವಾಹನಗಳು |
|---|---|---|---|---|
| 01 | ಹೊಸಕೋಟೆ | 01 | ರಾಮನಗರ | 03 |
| 02 | ನೆಲಮಂಗಲ | 02 | ಕನಕಪುರ | 02 |
| 03 | ದೊಡ್ಡಬಳ್ಳಾಪುರ | 02 | ಮಾಗಡಿ | 01 |
| 04 | ದೇವನಹಳ್ಳಿ | 01 | ಚನ್ನಪಟ್ಟಣ | 02 |
| | ಒಟ್ಟು | **06** | ಒಟ್ಟು | **08** |